J.S.S. Banashankari Arts Commerce
Vidyagiri
DHARWAD-04.

# ಭಾಷಾ ಕಲಿಕೆ – ತಂತ್ರಜ್ಞಾನ ಬಳಕೆ

• ಡಾ. ಆರ್. ವಿ. ಪಾಟೀಲ

ಸೃಷ್ಟಿಯಲ್ಲಿ ಉದಯಿಸಿದ ಸಕಲ ಜೀವರಾಶಿಗಳಲ್ಲಿ ಮನುಷ್ಯ ಜೀವಿ ವಿಶಿಷ್ಟವಾಗಿ ರೂಪಗೊಂಡಿದೆ. ತನ್ನ ಪ್ರತಿಭೆ, ಬುದ್ಧಿವಂತಿಕೆ, ಪ್ರಯತ್ನದಿಂದ ಹೊಸ ಹೊಸ ಶೋಧಗಳನ್ನು ನಡೆಸುತ್ತ ಹೊರಟಿದ್ದಾನೆ. ಮೊದಮೊದಲು ಯೋಚನೆ, ಚಿಂತನೆ, ಭಾವನೆಗಳನ್ನು ವ್ಯಕ್ತಪಡಿಸಲು ಆಂಗಿಕ ಅಭಿನಯದ ಜೊತೆಗೆ ಧ್ವನಿ ಸಂಕೇತದ ಮುಖಾಂತರ ಪರಸ್ಪರ ಸಂಪರ್ಕ ಹೊಂದಲು ಮಾತನಾಡಲು ಕಲೆತು ಭಾಷೆಯನ್ನು ಸೃಷ್ಟಿಸಿಕೊಂಡು ಮನುಷ್ಯ ಇತರ ಜೀವಿಗಳಿಗಿಂತ ವಿಭಿನ್ನವಾಗಿ ಬೆಳೆದ. ತಾನು ಹುಟ್ಟುಹಾಕಿಕೊಂಡ ಭಾಷೆಯನ್ನು ತನ್ನ ವೈಚಾರಿಕತೆಯ ವಿಕಾಸದ ಸಾಧನವನ್ನಾಗಿ ಬಳಸಿಕೊಂಡನು. ಸಮಾಜದಲ್ಲಿ ಬದುಕಿ ಸಂಘಜೀವನವನ್ನು ರೂಪಿಸಿಕೊಳ್ಳಲು ಭಾಷಾ ಕಲಿಕೆ ಪ್ರಮುಖ ಸಾಧನವಾಗಿದೆ. ಭಾಷಾ ಕಲಿಕೆಯ ಮೂಲಕ ಮನುಷ್ಯ-ಮನುಷ್ಯರು ಪರಸ್ಪರ ಕೂಡುಕೊಳ್ಳುವಿಕೆ–ಕೊಡುಕೊಳ್ಳುವಿಕೆ, ವಿಚಾರ ವಿನಿಮಯ, ಭಾವನೆಗಳ ಅಭಿವ್ಯಕ್ತಿಗೆ ಹಾಗೂ ಭಾವನಾತ್ಮಕ ಸಾಮಾಜಿಕ ಸಂಬಂಧಗಳ ಜಾಗೃತವಾಗಿ ಬೆಳೆಯಲು ಭಾಷೆಯು ಪ್ರಮುಖ ಸಾಧನವಾಗಿದೆ. ಜ್ಞಾನ–ವಿಜ್ಞಾನ, ಮಾಹಿತಿತಂತ್ರಜ್ಞಾನ ಮತ್ತು ಸಂಶೋಧನೆಗಳು ಭಾಷೆಯಿಂದ ಹುಟ್ಟಿಕೊಂಡು ಎಲ್ಲ ಕ್ಷೇತ್ರದಲ್ಲಿ ಸಮಗ್ರವಾಗಿ ಬೆಳೆದಿವೆ. ಮನುಷ್ಯನ ಮನಸ್ಸು, ಹೃದಯದ ಭಾವನೆ, ಆಲೋಚನೆ, ಕನಸು ಕಲ್ಪನೆಗಳಿಗೆ ಜೀವ ತುಂಬಿಕೊಂಡಿರುವದು ಭಾಷೆಯ ಮೂಲಕ ಈ ಭಾಷೆಯೆಂಬುದೇ ತಂತ್ರಜ್ಞಾನವಾಗಿದೆ. ಆದ್ದರಿಂದ ಮನುಷ್ಯನು ಜ್ಞಾನ ಕ್ಷೇತ್ರದಲ್ಲಿ ಪ್ರಗತಿ ಹೊಂದಲು ಭಾಷೆಯನ್ನು ಕಲೆಯುವದು ತುಂಬಾ ಮಹತ್ವದ್ದಾಗಿದೆ.

ಭಾಷೆಯ ಇತಿಹಾಸ ಮನುಷ್ಯನಷ್ಟೆ ಪ್ರಾಚೀನವಾದದ್ದು. ದಂಡಿ ಎಂಬ ವಿದ್ವಾಂಸ: "ಭಾಷೆ ಎಂಬ ಜ್ಯೋತಿ ಬೆಳಗದಿದ್ದರೆ ಜಗತ್ತು ಕತ್ತಲೆಯಲ್ಲಿರುತ್ತಿತ್ತು" ಎಂದು ಹೇಳಿದ್ದಾನೆ. ಏನೂ ತಿಳಿಯದ ಮಾಂಸದ ಮುದ್ದೆಯಾಗಿ ಜನಿಸುವ ಮನುಷ್ಯನಿಗೆ ಜೀವಕಳೆ ತುಂಬಿ ಅರಿವನ್ನು ಮೂಡಿಸಿ ಉತ್ತರೋತ್ತರವಾಗಿ ಬೆಳೆಸಿ ಕ್ರೀಯಾಶೀಲನನ್ನಾಗಿ, ಚೈತನ್ಯಶೀಲನನ್ನಾಗಿಸುವದು ಆತನ ಭಾಷೆ. ಜೈವಿಕ ಜೀವಿಯಾಗಿ ಹುಟ್ಟಿದ ಮನುಷ್ಯನು ವಿಕಾಸ ಹೊಂದುತ್ತ ತನ್ನ ಸ್ವಪ್ರಯತ್ನದಿಂದ ಭಾಷೆಯನ್ನು ಕಲಿಯುತ್ತಾನೆ. ಕಲಿತ ಭಾಷೆಯನ್ನು ತನ್ನದಾಗಿಸಿಕೊಂಡು ತನ್ನ ಜೀವನವನ್ನೆಲ್ಲ ಭಾಷೆಯೊಂದಿಗೆ ಅವಿನಾಭಾವವಾಗಿ ಬೆಸೆದುಕೊಂಡು ಬೆಳೆಯುತ್ತ ಹೊರಟಿದ್ದಾನೆ. ಅದಕ್ಕಾಗಿ ಭಾಷೆಯು ಮಾನವನಲ್ಲಿ ಬಳಕೆಯಲ್ಲಿರುವ ವಿಶಾಲವಾದ ವ್ಯಾಪಕ ವ್ಯವಸ್ಥೆಯಾಗಿದೆ. ಭಾಷೆಯನ್ನು ಸ್ವಪ್ರಯತ್ನ ಹಾಗೂ ಸತತ ಕಲಿಕೆಯಿಂದ ಸಂಪಾದಿಸಿಕೊಂಡ ಅಮೂಲ್ಯ ಆಸ್ತಿಯಾಗಿದೆ. ತನ್ನ ಭಾವನೆ, ಸಂಸ್ಕೃತಿ ಹಾಗೂ ವ್ಯವಹಾರಕೊಸ್ಕರ ಬಳಸುವದರಿಂದ ಭಾಷೆಯನ್ನು ಸಂಸ್ಕೃತಿ ಮತ್ತು ಭಾವಾನುವಾಹಕ ಎಂದು ಕರೆಯುವರು.

ಜೀವನದಲ್ಲಿ ಭಾಷಾ ಕಲಿಕೆಯ ಅವಶ್ಯಕತೆ: ಸಮಕಾಲೀನ ಬದುಕಿನಲ್ಲಿ ಹೆಚ್ಚು ಹೆಚ್ಚು ಬುದ್ಧಿವಂತರಾಗಿ, ವಿಚಾರವಂತರಾಗಿ ಚಿಂತನ ಮಂಥನಗಳಲ್ಲಿ ತೊಡಗಿಕೊಂಡು ಜಗತ್ತಿನ ಸಮಸ್ಯೆಗಳನ್ನು ಪರಿಹರಿಸಿಕೊಂಡು ಬದುಕಬೇಕಾಗಿದೆ. ಅದಕ್ಕಾಗಿ ಭಾಷೆಗಳನ್ನು ಅಧ್ಯಯನ ಮಾಡುತ್ತ, ಭಾಷೆಗಳನ್ನು ಹೇಗೆ ಕಲಿಯಬೇಕು–ಹೇಗೆ ಕಲಿಸಬೇಕು, ಯಾವ ಯಾವ ತಂತ್ರವಿಧಾನಗಳನ್ನು ಬಳಸಿಕೊಳ್ಳಬೇಕು, ತಂತ್ರಜ್ಞಾನ ಬಳಸಿಕೊಂಡು ಭಾಷೆಯನ್ನು ಸರಳವಾಗಿ ಯಾವ ರೀತಿ ಕಲಿಯಬೇಕು–ಕಲಿಸಬೇಕು ಹೀಗೆ ಭಾಷಾ ಕಲಿಕೆಯ ಮೂಲಕ ಜ್ಞಾನ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಯೋಚನೆಗಳ ಬೆಳವಣಿಗೆಯನ್ನು ಹೇಗೆ ಪ್ರಸಾರ ಮಾಡಬೇಕು, ಪ್ರಪಂಚದ ಬೇರೆ ಬೇರೆ ಭಾಷೆಗಳನ್ನು ಬಳಸಿಕೊಂಡು ಯಾವ ರೀತಿ ಬೆಳೆಯಬಹುದೆಂಬ ವೈಜ್ಞಾನಿಕ ಚಿಂತನೆ ಇಂದು ನಡೆಯಬೇಕಾಗಿದೆ. ಭಾಷಾ ಕಲಿಕೆ ಹಾಗೂ



PRINCIPAL
J.S.S. Banashankari Arts, Commerce &
Shantikumar Gubbi Science College.
DHARWAD - 580 004.